ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1995

ಪರ್ಯೋಲೋಚನಾ ಪ್ರಸ್ತಾವ

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ) 1995ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಜೆ.ಎಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) : ಇದು ಮಂಡಲ್ ಪಂಚಾಯಿತ್ ಎಂದು ಇದ್ದುದು ಗ್ರಾಮ ಪಂಚಾಯತ್ ಎಂದು ಆಗಿದೆ. ಹಾಗೆಯೇ ಜಿಲ್ಲಾ ಪರಿಷತ್ ಎಂದು ಇದ್ದುದು ಜಿಲ್ಲಾ ಪಂಚಾಯತ್ ಆಗಿದೆ. ತಾಲ್ಲೂಕು ಪಂಚಾಯತ್ ಸೇರಿದೆ, ಇದು ಬರೇ ಹೆಸರು ಬದಲಾವಣೆ ಅಷ್ಟೆ

ಶ್ರೀ ವೈ. ರಾಮಕೃಷ್ಣ : ಉದ್ದೇಶ ಮತ್ತು ಕಾರಣದಲ್ಲಿ ಹೇಳಿದ್ದಾರೆ. 1974ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮದ ಎರಡನೆಯ ತಿದ್ದುಪಡಿಗೆ ಕರ್ನಾಟಕ ಪಂಚಾಯತ್‌ರಾಜ್‌ನಲ್ಲಿ ತಿದ್ದುಪಡಿ. ಇದಕ್ಕೆ ಸ್ಪಷ್ಟೀಕರಣ ಕೊಡಿ ಏಕೆಂದರೆ ಇದರಲ್ಲಿ ಸ್ಪಷ್ಟೀಕರಣ ಇಲ್ಲ. ಇದರಲ್ಲಿ ಉದ್ದೇಶಗಳು ಮತ್ತು ಕಾರಣಗಳನ್ನು ಇನ್ನೂ ದೀರ್ಘವಾಗಿ ಹೇಳಿದ್ದರೆ ನಮಗೆ ಅನುಕೂಲ ಆಗುತ್ತಿತ್ತು. ಈ ತಿದ್ದುಪಡಿ ಉದ್ದೇಶ ಏನು ಎಂದು ನಮಗೆ ಮೊದಲು ಅರ್ಥ ಆಗಬೇಕು. ಈ ಉದ್ದೇಶ ಎಷ್ಟು ಎಕರೆಗಳಿಗೆ ಅನ್ವಯಿಸುತ್ತದೆ. ಎನ್ನತಕ್ಕ ಸ್ಟ್ಯಾಟಿಸ್ಟಿಕ್ಸ್ ಇರಬೇಕಿತ್ತು. what necessiated you it to bring this amendment?

ಎನ್ನುವುದು ನಮಗೆ ಗೊತ್ತಾಗಬೇಕಲ್ಲ.

ಶ್ರೀ ಜೆ.ಎಚ್. ಪಟೀಲ್ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಆಕ್ಟ್‌ನಲ್ಲಿ ಏನು ಇದೆ. ಆ ಆಕ್ಟ್ Karnataka Public Promises (Eviction of Un-authorised Occupants) Act,ಇದರಲ್ಲಿ ಮಂಡಲ್ ಪಂಚಾಯತಿ ಇದ್ದುದು ಈಗ ಗ್ರಾಮ ಪಂಚಾಯಿತಿ ಎಂದು ಆಗಿದೆ. ತಾಲ್ಲೂಕು ಪಂಚಾಯಿತಿ ಸೇರಿದೆ. ಜಿಲ್ಲಾ ಪರಿಷತ್ ಎಂದು ಇದ್ದುದು ಈಗ ಗ್ರಾಮ ಪಂಚಾಯಿತಿ ಎಂದು ಆಗಿದೆ. ಅದಕ್ಕೋಸ್ಕರ ಖರ್ಚು ಏನೂ ಇಲ್ಲ. ಬರೇ ಹೆಸರುಗಳು ಅಷ್ಟೇ ಹೆಸರುಗಳು ಅಷ್ಟೇ ತಿದ್ದುಪಡಿ ಮಾಡಬೇಕು ಎಂದು ಇರುವುದು.

ಶ್ರೀ ಡಿ.ಕೆ. ಶಿವಕುಮಾರ್ : ಈ ಬಿಲ್ ತಂದಿರುವುದರಿಂದ ನಾನು ಅಂದುಕೊಂಡಿದ್ದೇನೆ, ಎಂದರೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮಂಡಲ್ ಪಂಚಾಯತ್‌ನಲ್ಲಿ ಸಾರ್ವಜನಕರ ಆಸ್ತಿ ಏನು ಇದೆ. ಆ ಆಸ್ತಿಗೆ ಯಾರಾದರೂ ಪ್ರವೇಶಕ ಮಾಡಿದರೆ ಅವರನ್ನು ಹೊರಗೆ ಹಾಕಲಿಕ್ಕೆ ತಾಲ್ಲೂಕು ಪಂಚಾಯತಿಗೆ, ಜಿಲ್ಲಾ ಪಂಚಾಯತಿಗೆ ಹಕ್ಕನ್ನು ಕೊಡುತ್ತಿದ್ದಾರೆ ಎಂದು.

ಉಪಾಧ್ಯಕ್ಷರು : ಮಂಡಲ್ ಪಂಚಾಯತ್, ಗ್ರಾಮ ಪಂಚಾಯತಿ ಆಯಿತು. ತಾಲ್ಲೂಕು ಪಂಚಾಯತಿ ಹೊಸದಾಗಿ ಸೇರ್ಪಡೆಯಾಗಿದೆ. ಜಿಲ್ಲಾ ಪರಿಷತ್ತು ಜಿಲ್ಲಾ ಪಂಚಾಯತ್ ಎಂದು ಆಗಿದೆ. ಅಷ್ಟೇ.

ಶ್ರೀ ಎಚ್.ಎನ್. ನಂಜೇಗೌಡ : ಈಗ ಏನು ಆಗಿದೆ ಎಂದರೆ ಯಾವುದಾದರೂ ಅಮೆಂಡ್ ಮೆಂಟ್‌ಕೊಟ್ಟರೆ ನಮಗೆ ಎಕ್ಸಪ್ಲೇನೇಷನ್ ಕೊಡಬೇಕು. ಇದು ಒಂದು .ಅಧಿ ನಿಯಮ ಎಂದರೆ ಒರಿಜಿನಲ್ ಆಕ್ಟ್ ಏನು ಒರಿಜಿನಲ್ ಆಕ್ಟ್‌ನಲ್ಲಿ ಏನು ಪ್ರಾವಿಜನ್‌ಇರುತ್ತದೆ? Whether it should be amended or added?

ಹೀಗೆ ಏಕೆ ಕ್ಯಾಶುಯಲ್ ಆಗಿ ಮಾಡುತ್ತೀರಿ? Suppose I read this without any background what should I understand? what was in the original and what is to be incuded?

ಅಷ್ಟೇ ನಮಗೆ ಎಕ್ಸಪ್ಲೇನೇಷನನ್ನು ಕೊಡಬೇಕಾಗುತ್ತದೆ

ಶ್ರೀ ಎಂ.ಸಿ. ನಾಣಯ್ಯ : ತಾವು ದಯವಿಟ್ಟು ಬಿಲ್ ನೋಡಿ. The Karnataka Public Premises (E viction of Unauthorised Occupants) (Amendment) Bill 1995

ನಾವು ಯಾವುದನ್ನು ತಿದ್ದುಪಡಿ ಮಾಡಲಿಕ್ಕೆ ಎಂದು ಹೇಳುತ್ತಾ ಇರತಕ್ಕದ್ದು ತರುತ್ತಿದ್ದೇವೆ ಎಂದು ಪುಟ ಎರಡಲ್ಲಿ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ ಮತ್ತು ರೀಸನ್ಸ್‌ನಲ್ಲಿ ಇದೆ.

Section 2 of the Karnataka Public Premises (Eviction of Unauthorised Occupants) Act 1974 is propsed to be amended to bring on consonante with the Karnataka panchyat Raj Act 1993. ಅಲ್ಲಂದ ಹಿಂದೆ ಅನೆಕ್ಸರ್ ಕೊಟ್ಟಿದ್ದೇವೆ. ಯಾವುದನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದೇವೆ ಎಂದು ಅನೆಕ್ಸರ್‌ನಲ್ಲಿ ಕೊಟ್ಟಿದ್ದೇವೆ. ಈಗ ಇರತಕ್ಕದ್ದು "Public prenises" means any premises belonging to or allotted to state Government or taken on lease or requisitioned by or on be half of the state Government and includes any premises be longing to or taken on lease by or on behalf of a local authority ;

ಎಕ್ಸಪ್ಲನೇಷನ್ ನೋಡಿ. For the purposes of this clause local authority means - ಏನೆಂದು ಹೇಳಿದ್ದೇವೆ.

ಅಂದರೆ ಹಿಂಭಾಗದಲ್ಲಿ ಇರುವುದನ್ನು ಅವರು ನೋಡಲಿಲ್ಲ.

ಉಪಾಧ್ಯಕ್ಷರು : ಹೆಸರು ಮಾತ್ರ ಛೇಂಜ್ ಮಾಡುತ್ತಾ ಇರತಕ್ಕದ್ದು.

ಶ್ರೀ ಎಂ.ಸಿ. ನಾಣಯ್ಯ : ಕಾನೂನು ಇದೆ,ಆ ಕಾನೂನು ನಮ್ಮ 1976ರ ಕಾನೂನಿನಲ್ಲಿ ಯಾವುದು ಇತ್ತು, ಅದರಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾನೂನು ಇದೆ, ಅದನ್ನು ತಿದ್ದುಪಡಿ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಇವರು ಇಂಟ್ರೊಡ್ಯೂಸ್ ಮಾಡುವ ಟೈಮ್‌ನಲ್ಲಿ ನಮಗೆ ಬಿಲ್ ಕೊಡುತ್ತಾರೆ. ನಾವು ಓದಬೇಕಲ್ಲ, ಈಗ ಏನು ಇದೆ, ಹಿಂದೆ ಏನು ಇತ್ತು ಅದನ್ನು ಕೊಡಬೇಕು. ಒರಿಜಿಸಲ್ ಆಕ್ಟ್‌ನಲ್ಲಿ ಏನು ಇತ್ತು ಅದು ನಮಗೆ ತಿಳಿಯಬೇಕು. Should suggest amendnonts.

ಎಲ್ಲಾ ಗಾಳಿಗೆ ತೂರಿ ಬಿಟ್ಟು ಬಿಲ್ ತಂದು ಇಲ್ಲಿ ಕನ್ಸಿಡರೇಷನ್‌ಗೆ ಎಂದು ಇಟ್ಟು ನಮಗೆ ಕಾಪಿ ಕೊಟ್ಟರೆ How are we to know?

ತಾವು ಯೋಚನೆ ಮಾಡಿ.

ಶ್ರೀ ಜೆ.ಎಚ್. ಪಟೀಲ್ : ಏನಾದರೂ ಚರ್ಚೆ ಮಾಡುವ ಅವಶ್ಯಕತೆ ಇದೆ ಎಂದರೆ ನಾವು ಒಪ್ಪುತ್ತೇವೆ. ಸದನಕ್ಕೆ ಮುಚ್ಚಿಟ್ಟು ತಕ್ಷಣ ಬಿಲ್‌ಪಾಸ್‌ಮಾಡತಕ್ಕದ್ದು ಇದು ಅಲ್ಲ. ಇದರಲ್ಲಿ ಏನೂ ಚರ್ಚಾಸ್ಪದ ಇಲ್ಲ ಎಂದು ತಿಳಿದಿದ್ದೇವೆ. ಮಂಡಲ್ ಪಂಚಾಯತಿ ಎನ್ನುವುದು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಂತ ಸೇರಿದೆ. ಜಿಲ್ಲಾ ಪರಿಷತ್ತು ಜಿಲ್ಲಾ ಪಂಚಾಯತ್ ಎಂದು ಹೆಸರು ಮಾತ್ರ ಬದಲಾವಣೆ ಆಗಿರುವುದು. ಇದರಲ್ಲಿ ಏನು ಚರ್ಚೆ ಮಾಡೋಣ?

ಶ್ರೀ ವೈ. ರಾಮಕೃಷ್ಣ : ಒರಿಜಿನಲ್ ಆಕ್ಟ್ ನಾವು ನೋಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಚರ್ಚೆ ಎಂದು ನಾವು ಹೇಳುತ್ತಿಲ್ಲ. ಇವರು ಇಂಟ್ರೊಡ್ಯೂಸ್ ಮಾಡತಕ್ಕ ಕಾಲದಲ್ಲಿ it is only a substitution and nothing else ಎಂಬ ಒಂದು ವರ್ಡ್ ಇದ್ದರೆ ಈ ರೀತಿ ಬರುತ್ತಾ ಇರಲಿಲ್ಲ. ಇಂಟ್ರೊಡ್ಯೂಸ್ ಮಾಡುವಾಗ ಅಷ್ಟಾದರೂ ಸ್ವಲ್ಪ ಹೇಳದಿದ್ದರೆ ಹೇಗೆ?

ಉಪಾಧ್ಯಕ್ಷರು : ಮೊದಲೇ ಬಿಲ್ ಕಳಸತಕ್ಕ ವ್ಯವಸ್ಥೆ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ಈ ಬಿಲ್ ತಂದಿರುವ ಉದ್ದೇಶ ಸಾರ್ಥಕ ಆಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಮಂಡಲ್ ಪಂಚಾಯತಿಗೆ, ಜಿಲ್ಲಾ ಪರಿಷತ್ತಿಗೆ ಎಂದು ಇರುವುದನ್ನು ಬದಲಾಯಿಸುವುದಕ್ಕೆ ತಂದಿರುವ ಅಮೆಂಡ್‌ಮೆಂಟ್ ಇದು. ತಾಲ್ಲೂಕ್ ಪಂಚಾಯತಿ ಜಿಲ್ಲಾ ಪಂಚಾಯತಿ ಮತ್ತು ಮಂಡಲ್ ಪಂಚಾಯತಿಗೆ ಅಧಿಕಾರ ಕೊಟ್ಟಿದ್ದಾರೆ, ಯಾವುದು ಎಂದರೆ ಎವಿಕ್ಟ್ ಮಾಡುವ ಒಂದು ಅಧಿಕಾರ. ಬಹುಶಃ ಈ ಬಿಲ್ ತಂದಿರುವ ಉದ್ದೇಶ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಂಡು ಏನು ಅಧಿಕಾರ ಇದೆ. ಅದನ್ನು ಅಸಿಸ್ಟೆಂಟ್ ಕಮೀಷನರ್‌ಗೆ ತಹಶೀಲ್ದಾರ್‌ಗೋ ಇಲ್ಲವೇ ಡಿಸಿಗೋ ಕೊಟ್ಟರೆ ಮಾತ್ರ ಈ ಬಿಲ್ಲಿಗೆ ಬೆಲೆ ಬರುತ್ತದೆ. ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಏಕೆಂದರೆ ಜಿಲ್ಲಾ ಪಂಚಾಯತ್ ತಾಲ್ಲೂಕ್ ಪಂಚಾಯತ್ ಬಂದ ಮೇಲೆ ಸರ್ಕಾರದ ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೆ ಬಹುಶಃ ಈ ಪಂಚಾಯತಿಗಳಿಗೆ ರಾಜಕಾರಣಿಗಳಿಗೆ ಸಾಧ್ಯ ಇಲ್ಲ. ಇನ್ನಾದರೂ ನೀವು ಡಿಸಿಗೆ ಇಲ್ಲ ಎಸಿಗೆ ಅವಕಾಶ ಮಾಡಿಕೊಡಿ. ಇದನ್ನು ವಿತ್‌ಡ್ರಾ ಮಾಡಿ. ಲೋಕಲ್ ಅಥಾರಿಟೀಸ್ ಏನು ಇದೆ, ಅದನ್ನು ತೆಗೆದು ಹಾಕಿ ಕಲೆಕ್ಟರ್‌ಗೋ ಇಲ್ಲ ಅಸಿಸ್ಟೆಂಟ್‌ಕಮೀಷನರ್‌ಗೋ ಇಲ್ಲ ಡಿಸಿಗೆ ಮಾಡಿದರೆ ಮಾತ್ರ ಬಹುಶಃ ನಮ್ಮ ಸರ್ಕಾರದ ಆಸ್ತಿಗಳನ್ನು ಉಳಿಸಿಕೊಳ್ಳಬಹುದು ಎಂದು ನಾನಾದರೂ ತಿಳಿದುಕೊಂಡಿದ್ದೇವೆ. ಆದ್ದರಿಂದಲೇ ಬಿಲ್ಲನ್ನು ವಾಪಸ್ ತೆಗೆದುಕೊಂಡು ಲೋಕಲ್ ಅಥಾರಿಟಿ ಬದಲಾಗಿ ಎಸಿ,ಡಿಸಿ,ತಹಶೀಲ್ದಾರ್ ಅವರುಗಳನ್ನು ಅಧಿಕಾರಿಗಳಾಗಿ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಹಿರಿಯ ಸದಸ್ಯರಾದ ಮಾನ್ಯ ಡಿ.ಕೆ. ಶಿವಕುಮರ್ ಅವರು ಹೇಳಿದ್ದಾರೆ. ಈಗ ಒಂದು ಕಾನೂನು ಇದೆ. ಈ ಕಾನೂನಿನ ಒಂದು ವಿಧಿಯನ್ನು ನಾವು ತಿದ್ದುಪಡಿ ಮಾಡುತ್ತಿದ್ದೇವೆ. ಅದರಲ್ಲಿ ಲೋಕಲ್ ಅಥಾರಿಟೀಸ್ ಎಂದು ಹುದ್ದೆ ಇದ್ದದ್ದನ್ನು ಜಿಲ್ಲಾ ಪರಿಷತ್ತಿಗೆ ಬದಲಾಗಿ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಅಂತ ಸೇರಿಸಿದ್ದೇವೆ, ಮಂಡಲ್ ಪಂಚಾಯತಿಗೆ ಬದಲು ಗ್ರಾಮ ಪಂಚಾಯತಿ ಎಂದು ಸೇರಿಸಿದ್ದೇವೆ. ಬಾಕಿ ಇರತಕ್ಕ ವಿಧಿ ವಿಧಾನಗಳು ಎಲ್ಲ ಆ ಕಾಯಿದೆಯಲ್ಲಿದೆ. ಆ ಕಾಯಿದೆಯಲ್ಲಿ ಯಾವ್ಯಾವ ಅಧಿಕಾರಿಗಳು ಈ ಒಂದು ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಇರತಕ್ಕವರು ಇದ್ದರು ಅಧಿಕಾರ ಅವರಿಗೆ ಇದೆ. ಸೆಕ್ಷನ್ (3)ರಲ್ಲಿ ಆಥರೈಸ್ಡ್ ಆಫೀಸರ್ಸ್ ಎಂದು ಹೇಳುತ್ತಾ ಇರತಕ್ಕದ್ದು ಕಾನೂನಿನ ಅಡಿಯಲ್ಲಿ ಪೂರ್ತಿಯಾಗಿದೆ. ಅದರಲ್ಲಿರತಕ್ಕ ಕ್ಲಾಸ್ (ಬಿ) ಆಫೀಸರ್ಸ್

ಕ್ಲಾಸ್ (ಬಿ) ಆಫೀಸರ್ಸ್ ಎಂದರೆ ಎಸಿಗೆ ಅಧಿಕಾರ ಇದೆ, ಲೋಕಲ್ ಅಥಾರಿಟೀಸ್‌ಗೆ ಆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಇದರಲ್ಲಿ ಏನೂ ಅದು ಬರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಒರಿಜಿನಲ್ ಆಕ್ಟ್‌ನಲ್ಲಿ ತಿದ್ದುಪಡಿ ಮಾಡುತ್ತೇವೆ. ಈ ಬಿಲ್‌ನಲ್ಲಿ ಬರುವುದಿಲ್ಲ. ಒರಿಜಿನಲ್ ಆಕ್ಟ್ ಯಾವುದು ಇದೆ, ಅದಕ್ಕೆ ಸಂಬಂಧಪಟ್ಟಂತೆ ತರುತ್ತೇವೆ. ಬಾಕಿ ಎಲ್ಲಾ ವಿಧಿಗಳನ್ನು ಒರಿಜಿನಲ್ ಆಕ್ಟ್‌ನಲ್ಲಿ ಉಳಿಸಿಕೊಂಡಿದ್ದೇವೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "1995ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗಹಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮ (ಎರಡನೆಯ) ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಉಪಾಧ್ಯಕ್ಷರು : "ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನೆ ಅಂಗೀಕಾರ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1 1995ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮದ ಎರಡನೆಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೊರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ "1994ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮದ ಎರಡನೆಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2) 1995ರ ಕರ್ನಾಟಕ ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಸಂಸದೀಯ ವ್ಯವಹಾರಗಳ ಹಾಗೂ ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1995ರ ಕರ್ನಾಟಕಕ ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರತ್ತೇನೆ.